OS 79/2018

PW-1

ಸಾಕ್ಷಿಯನ್ನು ದಿನಾಂಕ 15.06.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ : ಪ್ರತಿವಾದಿ ಪರ ಶ್ರೀ ಆರ್.ವಿ. ವಕೀಲರಿಂದಃ**

ನಾನು ಎಸ್.ಎಸ್.ಎಲ್.ಸಿ. ವರೆಗೆ ಓದಿರುತ್ತೇನೆ. ನಾನು ಪಿ.ಡಬ್ಲ್ಯೂಡಿ ಇಲಾಖೆಯಲ್ಲಿ ಗುತ್ತಿಗೆದಾರನಾಗಿರುತ್ತೇನೆ. ದಾವಾ ಸ್ವತ್ತು ಯಾವ ಇಸವಿಯಲ್ಲಿ ಪೋಡ್ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ದಿಃ 20.12.2015 ರಂದು ಸರ್ವೆ ಇಲಾಖೆಯವರು ಬಂದು ದಾವಾ ಸ್ವತ್ತುಗಳನ್ನು ಪೋಡ್ ಪ್ರಕಾರ ಅಳತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪೂರ್ವ ಪಶ್ಚಿಮ 200 ಅಡಿ ಇರಬಹುದು. ಉತ್ತರದ ಕಡೆ ಪೂರ್ವದಿಂದ ಪಶ್ಚಿಮಕ್ಕೆ 3 ಗುಂಟೆ ಆಸ್ತಿ ಉಳಿಸಿಕೊಂಡರೆ ಅದು ಯಾವುದೇ ಉಪಯೋಗಕ್ಕೆ ಬರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಅದನ್ನು ರಸ್ತೆಗೋಸ್ಕರ 18 ಅಡಿ ಅಗಲ ಬಿಟ್ಟುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಪಶ್ಚಿಮಕ್ಕೆ ಅವರ ಜಮೀನಿಗೆ ಹಾಗೂ ಆಲೆ ಮನೆಗೆ ಹೋಗುವುದಕ್ಕೋಸ್ಕರ ಉಳಿಸಿಕೊಂಡಿದ್ದರು. ಪ್ರತಿವಾದಿ ಮಾದಯ್ಯ ರವರ ಜಮೀನಿನಲ್ಲಿ ಆಲೆ ಮನೆ ಮಾಡಿದ್ದರು. ದಾವಾ ಸ್ವತ್ತಿನ ಪಶ್ಚಿಮದ ಕಡೆಗೆ ಪ್ರತಿವಾದಿಯವರಿಗೆ ಜಮೀನಾಗಲಿ, ಆಲೆ ಮನೆಯಾಗಲಿ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಆಲೆ ಮನೆ ಇತ್ತು ಎಂದು ನುಡಿಯುತ್ತಾರೆ. ಮಾದಯ್ಯ ನವರ ಜಮೀನಿನಲ್ಲಿ ಪ್ರತಿವಾದಿಗಳು ಆಲೆ ಮನೆ ಮಾಡಿದ್ದರು. ಆಲೆ ಮನೆ ಮಾಡುವುದಕ್ಕಾಗಿ ಕರಾರು ಒಪ್ಪಂದ ಮಾಡಿಕೊಂಡಿದ್ದರೊ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯರು ಮಾದಯ್ಯ ನವರ ಜಮೀನಿನಲ್ಲಿ ಯಾವುದೇ ಆಲೆ ಮನೆ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನಗೆ ದಾವಾ ಸ್ವತ್ತನ್ನು ಖರೀದಿಗೆ ಕೊಡುವ ಸಮಯದಲ್ಲಿ ಈಶಾನ್ಯ ಮೂಲೆಯಲ್ಲಿ ಮೂರು ಗುಂಟೆ ಆಸ್ತಿಯನ್ನು ಉಳಿಸಿಕೊಳ್ಳುತ್ತೇವೆ ಎಂದು ಹೇಳಿ ಖರೀದಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಉತ್ತರ ದಿಕ್ಕಿನಿಂದ ದಕ್ಷಿಣದ ಕಡೆಗೆ ಮೂರು ಗುಂಟೆ ಬಿಟ್ಟುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-10 ಕ್ರಯ ಪತ್ರದಲ್ಲಿ ತಪ್ಪಾಗಿ ಈಶಾನ್ಯ ಮೂಲೆ ಎಂದು ಬರೆಯುವ ಬದಲಾಗಿ ಉತ್ತರಕ್ಕೆ ಎಂದು ತಪ್ಪಾಗಿ ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಪತ್ರವನ್ನು ಸಿದ್ದಪಡಿಸುವ ಸಮಯದಲ್ಲಿ ಆಗಿರುವ ಗೊಂದಲವಾಗಿರುತ್ತದೆ ಎಂದರೆ ಸರಿಯಲ್ಲ. ಈಶಾನ್ಯ ಮೂಲೆಯಲ್ಲಿ ಮೂರು ಗುಂಟೆ ಕ್ರಯ ಪತ್ರವಾದಾಗಿನಿಂದಲೂ ಪ್ರತಿವಾದಿಯರ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಕ್ರಯಪತ್ರವಾದ ನಂತರ ಸರ್ವೆಯವರು ನಮ್ಮ ಸ್ವಾಧೀನವನ್ನು ನೋಡಿ ಆ ಪ್ರಕಾರ ಪೋಡ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಉತ್ತರ ದಿಕ್ಕಿನಲ್ಲಿ ಮೂರು ಗುಂಟೆ ಉಳಿದಲ್ಲಿ ಅದು ಪ್ರತಿವಾದಿಯರಿಗೆ ನಿರುಪಯುಕ್ತವಾಗಿ ನನಗೆ ಮಾರಾಟ ಮಾಡುತ್ತಾರೆ ಎಂಬ ದುರುದ್ದೇಶದಿಂದ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಮೂರು ಗುಂಟೆ ಕ್ಷೇತ್ರದಲ್ಲಿ ಕಟ್ಟಡ ಕಟ್ಟಿರುತ್ತಾರೆ ಎಂದರೆ ಸರಿ. ಕ್ರಯ ಪತ್ರ ಆದಾಗಿನಿಂದಲೂ ಪ್ರತಿವಾದಿಯವರು ಈಶಾನ್ಯ ಮೂಲೆಯಲ್ಲಿ ಸ್ವಾಧೀನದಲ್ಲಿ ಇರುವುದು ಗೊತ್ತಿದ್ದರೂ ಸಹ ಪ್ರತಿವಾದಿಯವರು ಕಟ್ಟಡ ಕಟ್ಟಿನ ನಂತರ ಈ ದಾವೆ ದಾಖಲುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಪೋಡ್ ಮಾಡುವ ಕಾಲಕ್ಕೆ ನಾನು ಹಾಜರಿದ್ದು, ಸಮ್ಮತಿ ಸೂಚಿಸಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈಗ ನಾನು ಯಾವುದೇ ಪೋಡ್ ಮಾಡಿರುವುದಿಲ್ಲ ಹಾಗೂ ಯಾವುದೇ ಸಹಿ ಮಾಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದ ಪತ್ರದ ಜೊತೆಗೆ ಹಾಜರುಪಡಿಸಿರುವ ಕಚ್ಚಾ ನಕ್ಷೆಯಲ್ಲಿ ಪ್ರತಿವಾದಿಯರ ಆಸ್ತಿ ಎಂದು ತೋರಿಸಿರುವ ಸ್ಥಳದಲ್ಲಿ ಅದರ ಅಗಲ ಎಷ್ಟು ಎಂದು ಹೇಳಿರುವುದಿಲ್ಲ ಎಂದರೆ ಸರಿ. ಅದರ ಅಗಲ ನಮೂದಿಸಿದ್ದಲ್ಲಿ ಪ್ರತಿವಾದಿಯರಿಗೆ ಸದರಿ ಆಸ್ತಿ ಉಪಯೋಗಕ್ಕೆ

ಬರುವುದಿಲ್ಲ ಎಂದು ನ್ಯಾಯಾಲಯಕ್ಕೆ ಗೊತ್ತಾಗುತ್ತದೆ ಎಂದು ಅದರ ಅಳತೆ ನಮೂದಿಸಿಲ್ಲ ಎಂದರೆ ಸರಿಯಲ್ಲ. ದಾವಾ ಬಿ ಷೆಡ್ಯೂಲ್ ಆಸ್ತಿ ಪ್ರತಿವಾದಿಯರದು ಎಂದು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್

ಗುಂಡ್ಲುಪೇಟೆ